ತಾರೀಖು 2ನೆ ಅಕ್ಟೋಬರ್ 1907.

ನಂ. ಫೈ. 1536—ಜಿ. ಎಫ್. 126-07—2, ಕಂಟ್ರೋಲರವರ ಆಫೀಸಿನಲ್ಲಿ ತರಬೀತಾಗುತ್ತಿರುವ ಪ್ರೊಬೇಷನರಿ ಅಸಿಸ್ಟೆಂಟ್ ಕಮಿಷನರ್ ಮಿ॥ ಜಿ. ಬಿ. ಹೆಬ್ಬಿಕರ್‌ರವರಿಗೆ ಮೈಸೂರು ಸರ್ವಿಸ್ ರೆಗ್ಯುಲೇಷನ್‌ಗಳ 177ನೆ ನಿಬಂಧನೆಯಮೇರೆ, ದಸರಾ ರಜಾವಿನ ಜತೆಗೆ ಬಂದು ತಿಂಗಳು ಹದಿನಾರು ದಿವಸಗಳ ಪ್ರಿವಿಲೇಜ್ ರಜಾ ಕೊಟ್ಟಿದೆ.

ತಾರೀಖು 9ನೆ ಅಕ್ಟೋಬರ್ 1907.

ನಂ. ರೆ. 2469—ಲ್ಯಾ. ರೆ. 72—07-3, 1907ನೆ ಇಸವಿಯ ಜುಲೈ 24ನೆ ತಾರೀಖಿನಿಂದ ಮಿ॥ ಟಿ. ಜೋಕ್ಕಣ್ಣ ಬಿ. ಎ. ಯವರಿಗೆ, ಹಿಂದಿನ ಬಿ. ಪೆಷ್ಕಾರ್ ಯಾ ಪಟ್ಟಿಗೆ ಸೇರಿದ ಅಸಿಸ್ಟೆಂಟ್ ಕಮಿಷನರುಗಳ 3ನೆ ತರಗತಿಯಿಂದ 2ನೆ ತರಗತಿಗೆ ಬಡ್ತಿ ಕೊಟ್ಟಿದೆ.

ತಾರೀಖು 10ನೆ ಅಕ್ಟೋಬರ್ 1907.

ನಂ. ರೆ. 2497—ಲ್ಯಾ. ರೆ. 191-07—3, 1894ನೆಯ ವರ್ಷದ 7ನೆಯ ನಂಬರ್ ಲ್ಯಾಂಡ್ ಅಕ್ವಿಸಿಷನ್ ರೆಗ್ಯುಲೇಷನಿನ 6ನೆಯ ಪ್ರಕರಣವನ್ನನುಸರಿಸಿ ಇದರಿಂದ ಪ್ರಸಿದ್ಧಪಡಿಸುವುದೇನೆಂದರೆ :—ಇದರಡಿ ವಿವರಿಸಿರುವ ಜಮೀನು ಸರ್ಕಾರಿ ಕೆಲಸಕ್ಕೆ ಎಂದರೆ, ತಿ. ನರಸೀಪುರ ತಾಲ್ಲೂಕಿನಲ್ಲಿರುವ ತಲಕಾಡಿನಲ್ಲಿ ಒಂದು ಮುನಾಫರಖಾನೆಯನ್ನು ಕಟ್ಟುವುದಕ್ಕೆ ಅವಶ್ಯಕವಾಗಿದೆ; ಮತ್ತು ಮೇಲ್ಕಂಡ ರೆಗ್ಯುಲೇಷನಿನ 7 ಮತ್ತು 3 (c) ಪ್ರಕರಣಗಳನ್ನನುಸರಿಸಿ ನಂಜನಗೂಡು ಸಬ್ ಡಿವಿಜ್ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮ್ಮಿಷನರಿಗೆ ಸದರಿ ಜಮೀನನ್ನು ಹೊಂದುವುದಕ್ಕೆ ಹುಕುಂ ಪಡೆಯಲು ಅಧಿಕಾರ ಕೊಟ್ಟಿದೆ.

ಡಿಸ್ಟ್ರಿಕ್ಟ್.	ತಾಲ್ಲೂಕು.	ಹೋಬ್ಳಿ.	ಗ್ರಾಮ.	ಖಾತೆದಾರರ ಹೆಸರು.	ಸರ್ವೆ ನಂಬರು.	ಮಿಶ್ರ ತರಿ ಯಾ ಬಾಗಾಯಿತು.	ಒಟ್ಟು ವಿಸ್ತೀರ್ಣ.	ಕಂದಾಯ	ಈಗ ಸರಕಾರಕ್ಕೆ ಬೇಕಾಗಿರುವ ವಿಸ್ತೀರ್ಣ.	ಕಂದಾಯ.	ಚತುರ್ಗಡಿ			
											ಪೂರ್ವ	ಪಶ್ಚಿಮ	ಉತ್ತರ	ದಕ್ಷಿಣ
ಮೈಸೂರು	ತಿ. ನರಸೀಪುರ	ತಲಕಾಡು	ಪೊಡಯಂಡಹಳ್ಳಿ	ಪುಟ್ಟರಂಗ ಮತ್ತು ಕಂಕರ್ಯ ಮತ್ತು ಅರುಣಾಚಲ್ಯ.	34	ಮಿಶ್ರ	ಎ. ಗು. 1 21	ಎ. 1	ಪೂರ್ವ ಪಶ್ಚಿಮ 77½ ಗಜಗಳು ಉತ್ತರ ದಕ್ಷಿಣ 60½ ಗಜಗಳು ಒಟ್ಟು 38 ಗುಂಟೆ ಗಳು	ರೂ. 1	ಕುಂದೂರು ಬಾಯಿಯ ನಿವೇಶನ	ತಲಕಾಡು ನರಸೀಪುರ ರಸ್ತೆ	ಸರ್ವೆ ನಂ. 33	ಸರ್ವೆ 34ರ ಪೈಕಿ ಉಳಿದ ಭಾಗ

ಹುಕುಂ ಬರೋಜೇಬ್,
ಸಿ. ಎಸ್. ಬಾಲಸುಂದರಂ ಐಯ್ಯರ್,
ಸರ್ಕಾರದ ಜನರಲ್ ಮತ್ತು ರೆವಿನ್ಯೂ ಇಲಾಖೆಗಳ ಅಫಿಷಿಯೇಟಿಂಗ್ ಸೆಕ್ರೆಟರಿ.

ಮಿಲಿಟರಿ.

ಇನ್ಸ್ಟಿಹಾರ್ನ್ ಮೆ.

ತಾರೀಖು 11ನೆ ಅಕ್ಟೋಬರ್ 1907.

ನಂ. 1207—9, ಮೈಸೂರು ಸೀಮೆಯ ಘನವನ್ನೈದಿದ ಶ್ರೀವರ್ ಮಹಾರಾಜರವರು ಮೈಸೂರು ಇಂಪೀರಿಯಲ್ ಸರ್ವಿಸ್ ರೆಜಿಮೆಂಟಿನಲ್ಲಿ ಈ ಕೆಳಗೆ ಕಂಡ ಬಡ್ತಿಯನ್ನು 1907ನೆ ಇಸವಿ ಅಕ್ಟೋಬರ್ 2ನೆ ತಾರೀಖು ಲಾಗಾಯಿತು ಮಂಜೂರ್ಮಾಡಿರುತ್ತಾರೆ :—

ಹೆಸರು.	ಯಾವ ದರ್ಜೆಯಿಂದ.	ಯಾವ ದರ್ಜೆಗೆ.
ಆನಂದರಾವ್ ಭೋಸ್ಲೆ	ರೆಜಿಮೆಂಟಲ್, ದಫೇದಾರ್ ಮೇಜರ್	ಜಮಾದಾರ್, 5ನೆ ಗ್ರೇಡ್.

ಹುಕುಂ ಬರೋಜೇಬ್,
ಆರ್. ಜಿ. ಜೋನ್ಸ್, ಲೆಫ್ಟಿನೆಂಟ್ ಕರ್ನಲ್,
ಮಿಲಿಟರಿ ಅಸಿಸ್ಟೆಂಟ್.